ಅಂತ. ನನಗೆ ಇನ್‌ಫ್ಲುಯೆನ್ಸ್ ಮಾಡಿದ ಗದ್ಯ ಅಂದರೆ ಎ.ಆರ್. ಕೃಷ್ಣಶಾಸ್ತ್ರಿಗಳ 'ವಚನ ಭಾರತ'ದ್ದು.

◆ **ನನಗೂ ಡಿವಿಜಿಯವರ 'ಜ್ಞಾಪಕಚಿತ್ರ ಶಾಲೆ'ಯ ಗದ್ಯ, ನವರತ್ನ ರಾಮರಾಯರ 'ಕೆಲವು ನೆನಪುಗಳು' ಗದ್ಯ ಇಷ್ಟ.**

ಗುಬ್ಬಿವೀರಣ್ಣನವರ 'ಗುಬ್ಬಿಕಂಪನಿ' ಗದ್ಯಾನೂ ಬಹಳ ಚೆನ್ನಾಗಿದೆ. ಅದರಲ್ಲಿ ಅವರು ನಾಟಕದ ಒಂದು ಕರಪತ್ರದ ಬಗ್ಗೆ ಬರೀತಾರೆ. ಅದರಲ್ಲಿ ಮೊದಲನೇ ಸಲ ಗುಬ್ಬಿಕಂಪನಿಯಲ್ಲಿ ಸ್ತ್ರೀಯರ ಪಾತ್ರಗಳನ್ನು ಸ್ತ್ರೀಯರೇ ನಿರ್ವಹಿಸುತ್ತಾರೆ ಅಂತ ಹಾಕಿರ್ತಾರೆ. ಇಡೀ ಪುಸ್ತಕ ಎಷ್ಟು ಚೆನ್ನಾಗಿದೆ. ಲಂಕೇಶ್ ಅದರ ಬಗ್ಗೆ ಬರೆದಾದ ಮೇಲೇನೇ ನಾನದನ್ನು ಓದಿದ್ದು. ಮೂರ್ತಿರಾಯರು, ತ.ಸು. ಶಾಮರಾಯರು, ಮಾಸ್ತಿ ಒಳ್ಳೆಯ ಗದ್ಯ ಬರೀತಿದ್ರು. ಹಾಗೆ ಹಳೆ ತಲೆಮಾರಿನವರು ಬಹಳ ಜನ ಚೆನ್ನಾಗಿ ಬರೀತಿದ್ರು.

◆ **ಲಂಕೇಶ್ ನಿಮ್ಮ ಮೆಚ್ಚಿನ ಲೇಖಕ ಯಾಕಾಗಿ?**

ಯಾಕೆಂದರೆ, ಕನ್ನಡದಲ್ಲಿ ಬೇರೆ ಯಾವ ಲೇಖಕನಿಗೂ ಇಲ್ಲದ ಒಂದು ಅಸ್ತಿತ್ವವಾದಿ ಪ್ರಜ್ಞೆ ಲಂಕೇಶರಲ್ಲಿದೆ. ಅದೊಂದು ರೆಸ್ಟ್‌ಲೆಸ್ ಆದ ಚೇತನ. ಯಾವುದರಲ್ಲೂ ವಿರಮಿಸದೇ ಇರುವ, ಎಲ್ಲವನ್ನೂ, ತನ್ನ ಸ್ವಂತವನ್ನೂ ವಿಮರ್ಶೆಗೆ ಒಳಪಡಿಸುವ ಒಂದು ಗುಣವಿದೆ ಅವರಲ್ಲಿ. ಅವರ ಗದ್ಯದಲ್ಲಿ ನಿಮಗೆ ಸತ್ವಹೀನವಾದ, ಇದನ್ನು ಓದೋಕೆ ಆಗೋಲ್ಲಪ್ಪ ಅನ್ನೋ ಒಂದು ಸಾಲೂ ಸಿಗೋದಿಲ್ಲ. ಆ ದೃಷ್ಟಿಯಿಂದ ನೋಡಿದರೆ ಲಂಕೇಶ್ ಈಸ್ ದಿ ಬೆಸ್ಟ್ ಪ್ರೋಜ್ ರೈಟರ್. ನಾನು ಒಪ್ಪದೇ ಇರುವ ಒಂದು ಗುಣವಿದೆ ಅವರಲ್ಲಿ. ಅವರ ಅರ್ಥಶಾಸ್ತ್ರದ ತಿಳಿವಳಿಕೆ ಅಷ್ಟು ಸಮರ್ಪಕವಾದುದಲ್ಲ. ಅದರಲ್ಲಿ ಕೆಲವು ಹುಂಬ ಉತ್ಸಾಹಗಳಿವೆ. ಅವರು ಮಾರ್ಕ್ಸ್‌ವಾದವನ್ನು ರಿಜೆಕ್ಟ್ ಮಾಡುವ ರೀತಿ ಕೂಡ ಸರಿಯಿಲ್ಲ. ಲೆಫ್ಟ್ ಬಗ್ಗೆ ಸರಿಯಾಗಿ ತಿಳಕೊಳ್ಳದೇನೇ ಟೀಕೆ ಮಾಡ್ತಾರೆ.

◆ **ಹೊಸತಲೆಮಾರಿನ ಲೇಖಕರ ಗದ್ಯ?**

ಅವರಲ್ಲಿ ಕೆಲವರದು ಬಹಳ ಸೆಲ್ಫ್ ಕಾನ್ಶಿಯಸ್ ಆದ ಪ್ರೋಸು. ಪ್ರಜ್ಞಾಪೂರ್ವಕವಾಗಿ ಬರೀಯೋದು. ನೀವು ಉಸಿರಾಡಿದಂಗೆ ಬರಿಯೋಕಾಗಲ್ಲ. ಒಪ್ಪಕೋತೀನಿ. ಬರವಣಿಗೆ ಅನ್ನೋದು ಅದರಷ್ಟಕ್ಕೆ ಅದು ನಡೆಯುವ ಪ್ರಜ್ಞಾಪೂರ್ವಕ ಕ್ರಿಯೆ. ಆದರೆ ಎದುರಾಳಿ ದಡ್ಡ ಅಲ್ಲ, ಆದರೆ ಬಹಳ ಓದಿದವನೂ ಅಲ್ಲ ಅಂತ ತಿಳಿಕೊಂಡು ಬರೆಯೋದಿದೆಯಲ್ಲ, ಅದು ಕಷ್ಟ.

◆ **ಭೈರಪ್ಪನವರ ಗದ್ಯ?**

ಅವರದು ಕೆಟ್ಟ ಗದ್ಯ. ಸಂದೇಹವೇ ಇಲ್ಲ. ಅವರ 'ಗೃಹಭಂಗ' ಅಥವಾ 'ಭಿತ್ತಿ' ಚೆನ್ನಾಗಿವೆ. ಅವರ ಆತ್ಮಚರಿತ್ರೆಯಲ್ಲಿ ಒಂದು ಇಮ್ಮಿಡಿಯಸಿ ಇದೆ. ಅದು ಫೆಲ್ಟ್ ಎಕ್ಸ್‌ಪೀರಿಯನ್ಸ್. ಆ ಬ್ರಾಹ್ಮಣರ ಬಡತನ ಎಲ್ಲ ಲೀವ್ಡ್ ಎಕ್ಸ್‌ಪೀರಿಯನ್ಸ್. ಆದರೆ 'ವಂಶವೃಕ್ಷ' ಲೀವ್ಡ್ ಎಕ್ಸ್‌ಪೀರಿಯನ್ಸಲ್ಲ; 'ಆವರಣ'ವಂತೂ ಅಲ್ಲವೇ ಅಲ್ಲ. ವಾರಾಣಸಿಯನ್ನು 'ಆವರಣ' ಚಿತ್ರಿಸೋದನ್ನೂ ಬಿ.ವಿ. ಕಾರಂತರು ತಮ್ಮ ಆತ್ಮಕತೆಯಲ್ಲಿ ಚಿತ್ರಿಸೋದನ್ನೂ ಕಂಪೇರ್ ಮಾಡಿ ನೋಡಿ. 'ಆವರಣ'ದ ವಾರಾಣಸಿ ಕಲ್ಪಿತ. ಬಿ.ವಿ. ಕಾರಂತರದ್ದು ಸಜೀವವಾದುದು. ಅವರು ಗಂಗಾನದಿಯ ತಟದಲ್ಲಿದ್ದ ಒಬ್ಬನ ಬಗ್ಗೆ ಹೇಳ್ತಾರೆ – ಬೆಳಗ್ಗಿಂದ ಸಾಯಂಕಾಲದವರೆಗೆ ಅವನಿಗೆ ದೇವರನ್ನು ಬಯ್ಯೋದೇ ಕೆಲಸ. ಹಾಗೆ ಬಯ್ಯೋ